ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ..ದಂ.ಗಳವರ ನ್ಯಾಯಾಲಯ, ಬನಹಟ್ಟಿ

**ಸಿ.ಸಿ.ನಂಃ 1966/2024**

ದಿಃ 06 ನೇ ಮಾರ್ಚ, 2026

ಕಾರ್ಮಿಕ ನಿರೀಕ್ಷಕರು, ಜಮಖಂಡಿ
ವಿರುದ್ಧ
ಮೆಹಬೂಬ ಸಂತ್ರಾಸ

ಃಆಪಾದನೆಃ

ನಾನು ಸೌಮ್ಯಾ ಹೂಲಿ, ಬಿ.ಎ.ಎಲ್.ಎಲ್.ಬಿ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬನಹಟ್ಟಿ ಆದ ನಾನು ಈ ಮೂಲಕಃ

ಆರೋಪಿಯ ಹೆಸರುಃ

1. ಮೆಹಬೂಬ ಸಂತ್ರಾಸ, ಮಾಲೀಕರು,
   ಸಾಲಿಮ್ ಗ್ಯಾರೇಜ್ ಗೋಲಬಾಂವಿ ರೋಡ,
   ಬಸ್ ನಿಲ್ದಾಣ ಎದುರಿಗೆ, ತೇರದಾಳ, ತಾಃ ರಬಕವಿ-ಬನಹಟ್ಟಿ

ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಏನೆಂದರೆಃ

ತೇರದಾಳ ಶಹರದ ವ್ಯಾಪ್ತಿಯಲ್ಲಿ ಬರುವ ತೇರದಾಳ ಬಸ್ ನಿಲ್ದಾಣದ ಎದುರಿಗೆ ಆರೋಪಿತರಾದ ನೀವು ಸಾಲಿಮ್ ಗ್ಯಾರೇಜ ಎಂಬ ಸಂಸ್ಥೆಯ ಮಾಲೀಕರಿದ್ದು, ದಿಃ27.09.2023 ರಂದು ಮುಂಜಾನೆ 11.00 ಗಂಟೆಗೆ ಪಿರ್ಯಾದಿದಾರರು ತನಿಖಾ ತಂಡದೊಂದಿಗೆ ಆಪಾದಿತರ ಸಂಸ್ಥೆಗೆ ಜಂಟಿ ತಪಾಸಣೆ ಕೈಗೊಂಡಿದ್ದು, ತಪಾಸಣೆ ಸಮಯದಲ್ಲಿ ಸದರಿ ಸಂಸ್ಥೆಯಲ್ಲಿ ಬಾಲ ಕಾರ್ಮಿಕ ಸುಶುದ್ದೀನ್ ಯುಸೂಪ್ ಮುಲ್ಲಾ, ವಯಸ್ಸುಃ 14 ಮಕ್ಕಳನ್ನು ಸಹಾಯಕ ಗ್ಯಾರೇಜ ವೆಲ್ಡಿಂಗ್ ಟ್ರಾಕ್ಟರ ಹುಡ್ಡ ತಯಾರಿಕೆ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂದಿದ್ದು ಆ ಮೂಲಕ ಆರೋಪಿತರಾದ ನೀವು ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ಮತ್ತು 14(3)(ಡಿ) ಬಾಲ್ಯಾವಸ್ಥೆಮತ್ತು ಕಿಶೋರಾವಸ್ಥೆ (ನಿಷೇಧ ಮತ್ತು ನಿಯಂತ್ರಣ) ಕಾಯಿದೆ 1986 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ?

ಉತ್ತರಃ- ತಿಳಿಯಿತು

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ?

ಉತ್ತರಃ- ವಿಚಾರಣೆ ಆಗಬೇಕು

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷ್ಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

Sd/-

ಸ್ಥಳಃ ಬನಹಟ್ಟಿ
ದಿನಾಂಕ ಃ 06.03.2026

ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಬನಹಟ್ಟಿ .

ಆರೋಪಿಯ ಸಹಿ-